ಸಂಭವಿಸುವುದಿಲ್ಲವೆಂದು, ಅರಿವು ಮೂಡಿಸಲಾಗಿದೆ.

ಇ) ಭೂಮೀಕರಣ ಯಂತ್ರಗಳ ಖರೀದಿಗಾಗಿ, ಔಷಧಿ ಮಳಿಗೆಗಳ ಮೂಲಕ ಅವಶ್ಯಕ ಔಷಧಿಗಳ ಪೂರೈಕೆಗಾಗಿ ಮತ್ತು ರಾಸಾಯನಿಕಗಳ ಸರಬರಾಜಿಗಾಗಿ ಇಲ್ಲಿಯವರೆಗೆ ರೂ. 505,15,216/- ವೆಚ್ಚ ಮಾಡಲಾಗಿದೆ.

1119 (761) ಡಾ॥ ಮಹದೇವಪ್ಪ ಹೆಚ್.ಸಿ. (ಟಿ.ನರಸೀಪುರ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಮಹಾರಾಷ್ಟ್ರ ರಾಜ್ಯದಲ್ಲಿ ಮಳೆ ಹೆಚ್ಚಾಗಿ ಬೀಳುತ್ತಿರುವುದರಿಂದ ರಾಜ್ಯದ ಕೃಷ್ಣ ನದಿ ನೀರಿನ ಮಟ್ಟ ಅಪಾಯ ಮಟ್ಟವನ್ನು ತಲುಪಿದ್ದು, ಇದರಿಂದ ಉತ್ತರ ಕರ್ನಾಟಕದ ಅನೇಕ ಜಿಲ್ಲೆಯ ಗ್ರಾಮಗಳು ನೀರಿನಿಂದ ಅವೃತಗೊಂಡಿದ್ದು, ಸಾಂಕ್ರಾಮಿಕ ರೋಗಗಳು ಹೆಚ್ಚಾಗುವ ಸಂಭವವಿರುವುದರಿಂದ ರೋಗ ನಿಯಂತ್ರಣಕ್ಕೆ ಪೂರ್ವಬಾವಿಯಾಗಿ ಕೈಗೊಂಡಿರುವ ಕ್ರಮಗಳೇನು ;

ಆ) ಯಾವ ಯಾವ ಜಿಲ್ಲೆಗೆ ಔಷಧಿ ಮತ್ತು ಇತರೆ ವೈದ್ಯಕೀಯ ವಸ್ತುಗಳನ್ನು ಎಷ್ಟು ಪ್ರಮಾಣದಲ್ಲಿ ಸರಬರಾಜು ಮಾಡಲಾಗಿದೆ ;

ಇ) ಸರ್ಕಾರದಿಂದ ಮತ್ತು ಸಂಘ ಸಂಸ್ಥೆಗಳಿಂದ ಸರಬರಾಜಾದ ಬಗ್ಗೆ ಸಮಗ್ರ ಮಾಹಿತಿಯನ್ನು ಒದಗಿಸುವುದು ;

ಈ) ಈಗಾಗಲೇ ಇದಕ್ಕಾಗಿ ಬಿಡುಗಡೆ ಮಾಡಲಾದ ಅನುದಾನವೆಷ್ಟು ?

ಶ್ರೀ ಆರ್. ಅಶೋಕ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ರಾಜ್ಯದಲ್ಲಿ ಮುಂಗಾರು ಪ್ರಾರಂಭವಾಗುವ ಮುಂಚೆಯೇ ಎಲ್ಲಾ ಜಿಲ್ಲೆಗಳಲ್ಲೂ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲಾಗಿದೆ :

1. ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ನಿರ್ದೇಶನಾಲಯದಿಂದ ಕಾಲಕಾಲಕ್ಕೆ ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಮಾರ್ಗಸೂಚಿಗಳನ್ನು ನೀಡಲಾಗಿದೆ.

2. ಪ್ರವಾಹಪೀಡಿತ ಪ್ರದೇಶಗಳಲ್ಲಿ ಸಾಂಕ್ರಾಮಿಕ ರೋಗಗಳು ಹರಡದಂತೆ ತಾತ್ಕಾಲಿಕ ಚಿಕಿತ್ಸಾ ಕೇಂದ್ರಗಳನ್ನು ತೆರೆದು ನಿರಂತರವಾಗಿ ಚಿಕಿತ್ಸಾ ಸೌಲಭ್ಯವನ್ನು ಕಲ್ಪಿಸಲಾಗಿದೆ.

3. ಪೀಡಿತ ಪ್ರದೇಶಗಳಲ್ಲಿ ಸಂಚಾರಿ ಚಿಕಿತ್ಸಾ ತಂಡಗಳು ಕಾರ್ಯನಿರ್ವಹಿಸುತ್ತಿವೆ.

4. ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಕ್ಷಿಪ್ರ ಕಾರ್ಯಾಚರಣೆ ಪಡೆಗಳನ್ನು

(Rapid Response Teams) ರಚಿಸಿ ಸಾಂಕ್ರಾಮಿಕ ರೋಗಗಳು ಹರಡದಂತೆ ಕಾರ್ಯನಿರ್ವಹಿಸುತ್ತಿವೆ.

5. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಇತರ ಇಲಾಖಾಧಿಕಾರಿಗಳ ಸಮನ್ವಯ ಸಮಿತಿಯನ್ನು ಕ್ರಮವಾಗಿ ಜಿಲ್ಲಾಧಿಕಾರಿಗಳ ಹಾಗೂ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ರಚಿಸಿ, ಸಭೆಗಳನ್ನು ಕರೆದು, ಪರಿಸ್ಥಿತಿಯ ಪರಿವೀಕ್ಷಣೆ, ಅಧ್ಯಯನ ಹಾಗೂ ಕಾರ್ಯತಂತ್ರ ರೂಪುರೇಷೆಗಳನ್ನು ಯೋಜಿಸಿ, ಅನುಷ್ಠಾನಗೊಳಿಸಲಾಗುತ್ತಿದೆ.

6. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಮಲೇರಿಯಾ ಅಧಿಕಾರಿಗಳು ಜಿಲ್ಲಾ ಸರ್ವೇಕ್ಷಣಾ ಅಧಿಕಾರಿಗಳು ಹಾಗೂ ಕೀಟಶಾಸ್ತ್ರಜ್ಞರುಗಳನ್ನು ಒಳಗೊಂಡಂತೆ ತಂಡವನ್ನು ರಚಿಸಿ ಯಾವುದೇ ಜ್ವರ ಪ್ರಕರಣ ವರದಿಯಾದಲ್ಲಿ ತಕ್ಷಣ ಕೂಲಂಕುಷ ಪರೀಕ್ಷೆ ಹಾಗೂ ತ್ವರಿತ ಚಿಕಿತ್ಸೆಗಾಗಿ ವ್ಯವಸ್ಥೆ ಮಾಡಲಾಗಿದೆ.

7. ಎಲ್ಲಾ ಕುಡಿಯುವ ನೀರಿನ ಮೂಲಗಳ ನೀರನ್ನು ಪರೀಕ್ಷಿಸಿ ಯೋಗ್ಯವಲ್ಲದ ಮೂಲಗಳನ್ನು ಸೂಪರ್ ಕ್ಲೋರಿನೇಷನ್ ಮಾಡಲಾಗುತ್ತಿದೆ.

8. ಗ್ರಾಮೀಣ ಪ್ರದೇಶಗಳಲ್ಲಿ ನೀರನ್ನು ಸುಲಭವಾಗಿ ಕ್ಲೋರಿನೇಷನ್ ಮಾಡಲು ಹಾಲೋಜನ್ ಮಾತ್ರೆಗಳನ್ನು ಪೂರೈಸಲಾಗಿದೆ.

9. ಎಲ್ಲಾ ಅವಶ್ಯಕ ಔಷಧಿಗಳನ್ನು ಕ್ರಿಮಿನಾಶಕಗಳನ್ನು ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೆ ಪೂರೈಸಲಾಗಿದೆ.

10. ರೋಗನಿಯಂತ್ರಣ ಕಾರ್ಯವನ್ನು ಮತ್ತು ಜನರಿಗೆ ಆರೋಗ್ಯ ಶಿಕ್ಷಣವನ್ನು ನಿರಂತರವಾಗಿ ಮಾಡಲಾಗುತ್ತಿದೆ.

ಆ) ಪ್ರವಾಹ ಪೀಡಿತ ಜಿಲ್ಲೆಗಳಾದ ಬೆಳಗಾವಿ, ಬಿಜಾಪೂರ, ಬಾಗಲಕೋಟೆ, ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳಿಗೆ ಸೊಳ್ಳೆಗಳಿಂದ ಮತ್ತು ಕಲುಷಿತ ನೀರಿನಿಂದ ಹರಡಬಹುದಾದ ಸಾಂಕ್ರಾಮಿಕ ರೋಗಗಳ ನಿಯಂತ್ರಣಕ್ಕಾಗಿ ಜೀವರಕ್ಷಕ ಔಷಧಿಗಳು, ಒ.ಆರ್.ಎಸ್. ಪೊಟ್ಟಣಗಳು, ಆಂಟಿಬಯೋಟಿಕ ಔಷಧಿಗಳ ದಾಸ್ತಾನನ್ನು ಅವಶ್ಯಕ ಪ್ರಮಾಣದಲ್ಲಿ ಇಡಲಾಗಿದೆ. ಅಲ್ಲದೆ ಆಯುರ್ವೇದ ವೈದ್ಯರುಗಳಿರುವ ಪ್ರಾ.ಆ.ಕೇಂದ್ರಗಳಲ್ಲಿಯೂ ಸಹ ಚಿಕಿತ್ಸೆಯನ್ನು ನೀಡಲು ವ್ಯವಸ್ಥೆ ಮಾಡಲಾಗಿದೆ. ಇದಲ್ಲದೆ ನೀರನ್ನು ಸುಲಭವಾಗಿ ಶುದ್ಧೀಕರಿಸಲು ಹಾಲೋಜೋನ್ ಮಾತ್ರೆಗಳನ್ನು ಸಹ ಎಲ್ಲಾ ಪ್ರಾ.ಆ. ಕೇಂದ್ರಗಳಿಗೆ ಪೂರೈಸಲಾಗಿದೆ.

ಇ) ಅಗತ್ಯವಿರುವ ಔಷಧಿಗಳು ಕ್ರಿಮಿನಾಶಕಗಳು, ಕೀಟನಾಶಕಗಳು, ಮತ್ತು

ಧೂಮೀಕರಣ ಯಂತ್ರಗಳನ್ನು ಸರ್ಕಾರದಿಂದ ಲಭ್ಯವಿರುವ ಅನುದಾನದಿಂದಲೇ ಪೂರೈಸಲಾಗಿದೆ.

ಸಂಘ–ಸಂಸ್ಥೆಗಳಿಂದ ಇದುವರೆಗೆ ಯಾವುದೇ ಔಷಧಿಗಳು ಹಾಗೂ ಇತರೆ ಸಲಕರಣೆಗಳು ಪೂರೈಕೆಯಾಗಿರುವುದಿಲ್ಲ.

ಈ) ರಾಯಚೂರು ಜಿಲ್ಲಾಡಳಿತದಿಂದ ಮಾತ್ರ ಸಾಂಕ್ರಾಮಿಕ ರೋಗಗಳ ನಿಯಂತ್ರಣಕ್ಕಾಗಿ 5.00 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಉಳಿದ ಜಿಲ್ಲೆಗಳಲ್ಲಿ ಲಭ್ಯವಿರುವ ಅನುದಾನದಿಂದಲೇ ಅಗತ್ಯಕ್ಕಿಂತ ಹೆಚ್ಚಾಗಿ ಔಷಧಿಗಳನ್ನು ಪೂರೈಸಲಾಗಿದೆ.

ಸೊಳ್ಳೆಗಳಿಂದ ಹರಡುವ ರೋಗಗಳ ನಿಯಂತ್ರಣಕ್ಕಾಗಿ ಧೂಮೀಕರಣ ಯಂತ್ರಗಳ ಖರೀದಿಗಾಗಿ, ಔಷಧಿ ಮಳಿಗೆಗಳ ಮೂಲಕ ಅವಶ್ಯಕ ಔಷಧಿಗಳ ಮತ್ತು ರಾಸಾಯನಿಕಗಳ ಪೂರೈಕೆಗಾಗಿ ಏಪ್ರಿಲ್ 2007 ರಿಂದ ಇದುವರೆಗೆ 11.65 ಲಕ್ಷ ರೂ.ಗಳನ್ನು ಲಭ್ಯವಿರುವ ಅನುದಾನದಲ್ಲಿಯೇ ವೆಚ್ಚ ಮಾಡಲಾಗಿದೆ.

ಮೊರಾರ್ಜಿ ವಸತಿ ಶಾಲೆ

1121 (540) ಶ್ರೀ ನಿರಾಣಿ ಮುರುಗೇಶ್ ರುದ್ರಪ್ಪ (ಬೀಳಗಿ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬೀಳಗಿ ಮತಕ್ಷೇತ್ರದ ಜಮಖಂಡಿ ತಾಲ್ಲೂಕಿನ ಸಾವಳಗಿ ಗ್ರಾಮವು ಮಾನ್ಯ ಬಿ.ಡಿ. ಜತ್ತಿ ಹಾಗೂ ಕಂಪ್ಯೂಟರ್ ಖ್ಯಾತಿಯ ಶ್ರೀಮತಿ ಸುಧಾಮೂರ್ತಿಯವರ ಹುಟ್ಟೂರಾಗಿದ್ದು ಇಂಥಹ ಗ್ರಾಮದಲ್ಲಿ ಮೊರಾರ್ಜಿ ವಸತಿ ಶಾಲೆ ಆರಂಭಿಸುವುದು ಅವಶ್ಯಕವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬರಗಾಲದ ಬವಣೆ ಎದುರಿಸುತ್ತಿರುವ ಸಾವಳಗಿ ಭಾಗವು ಆರ್ಥಿಕವಾಗಿ ದುರ್ಬಲವಾಗಿದ್ದು ಈ ಭಾಗದ ಮಕ್ಕಳಿಗೆ ಶಿಕ್ಷಣವೆ ಶಕ್ತಿಯಾಗಿರುವುದರಿಂದ ಮೊರಾರ್ಜಿ ವಸತಿ ಶಾಲೆ ಆರಂಭಿಸಲು ಕ್ರಮ ಕೈಗೊಳ್ಳಲಾಗುವುದೇ ;

ಇ) ಸಾವಳಗಿ ಭಾಗದ 33 ಹಳ್ಳಿಗಳು ಬೀಳಗಿ ಮತಕ್ಷೇತ್ರಕ್ಕೆ ಸೇರಿದ್ದು, ಇಲ್ಲಿ ಯಾವುದೇ ವಸತಿ ಶಾಲೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಮಾನ್ಯ ಸಮಾಜ ಕಲ್ಯಾಣ ಸಚಿವರು):–

ಅ) 2006–07ನೇ ಸಾಲಿಗೆ ಬೀಳಗಿ ಮತಕ್ಷೇತ್ರಕ್ಕೆ ಒಂದು ಪರಿಶಿಷ್ಟ ಜಾತಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯು ಮಂಜೂರಾಗಿ ಕಾರ್ಯ ನಿರ್ವಹಿಸುತ್ತಿದೆ. ಸಾವಳಗಿ ಗ್ರಾಮದಲ್ಲಿ